# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವ್ಯಾಪ್ತಿಗೊಳಪಡುವ ಕೇಂದ್ರ ಸರ್ಕಾರದ ಸಹಾಯಾನುದಾನ ಪಡೆದು ಸ್ವಯಂಸೇವಾ ಸಂಸ್ಥೆಗಳ ವತಿಯಿಂದ ನಿರ್ವಹಿಸುತ್ತಿರುವ 68 ವಿಶೇಷ ಶಾಲೆಗಳನ್ನು "ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ"ಯಡಿ ರಾಜ್ಯ ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಗಆದೇಶ

## ಓದಲಾಗಿದೆ:-

1. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ: ವಿಹಿನಾಸಇ:ಸಿ-9:ಯೋ.ಶಾ:ವಿ.ಶಾ.ಅ:2012-13/6197/2971 ಮತ್ತು 765, ದಿ: 26.5.2012, 21.3.2012, 09.11.2012 ಮತ್ತು 11.06.2013
2. ಸರ್ಕಾರದ ಪತ್ರ ಸಂಖ್ಯೆ:ಮಮಇ 168 ಪಿಹೆಚ್‌ಪಿ 2012 ದಿನಾಂಕ:18.5.2013

## ಪ್ರಸ್ತಾವನೆ:-

ಮೇಲೆ ಓದಲಾದ ಉಲ್ಲೇಖ(1)ರ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ತಮ್ಮ ಪ್ರಸ್ತಾವನೆಗಳಲ್ಲಿ ವಿವರಿಸಿರುವಂತೆ ಹಿಂದಿನ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನಾ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯನ್ನು ದಿ:9.5.2012 ರಂದು ನಡೆದ ಸಭೆಯ ಚರ್ಚೆಯನ್ವಯ ತೆಗೆದುಕೊಂಡ ನಿರ್ಣಯದ ಆಧಾರದ ಮೇಲೆ ಸಲ್ಲಿಸಿರುವ ಪ್ರಸ್ತಾವನೆಯಾಗಿದ್ದು, ಅದರಂತೆ, ವಿಕಲಚೇತನರಿಗಾಗಿ ಹಲವಾರು ಸ್ವಯಂಸೇವಾ ಸಂಸ್ಥೆಗಳು ಶಾಲೆಗಳನ್ನು ನಡೆಸುತ್ತಿದ್ದು, ಆ ಶಾಲೆಗಳಿಗೆ ನೀಡುವ ಅನುದಾನವನ್ನು ಪಡೆಯುವಲ್ಲಿ ಸಂಸ್ಥೆಗಳು ಬಹಳ ಕಿರುಕುಳ ಅನುಭವಿಸುತ್ತಿರುವುದರೊಂದಿಗೆ ಹಲವಾರು ಬಾರಿ ಕಛೇರಿಯಿಂದ ಕಛೇರಿಗೆ ಅಲೆದಾಡುವ ಪರಿಸ್ಥಿತಿಯನ್ನು ಹೋಗಲಾಡಿಸಲು ಶಿಕ್ಷಣ ಇಲಾಖೆಯಲ್ಲಿ ಅನುಸರಿಸುತ್ತಿರುವ ಪದ್ಧತಿಯನ್ನೇ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿಯೂ ಅನುಸರಿಸುವುದು ಸೂಕ್ತವೆಂದು ಪರಿಗಣಿಸಿ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವುದರ ಬಗ್ಗೆ ಪರಿಶೀಲಿಸಿ ಸಲ್ಲಿಸಿದ ವರದಿಯಲ್ಲಿ ಈ ಕೆಳಕಂಡ ಒಟ್ಟು 235 ವಿಶೇಷ ಶಾಲೆಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 ರಡಿ ಅಳವಡಿಸಿ ಶಿಕ್ಷಣ ಇಲಾಖೆಯಲ್ಲಿ ಅನುದಾನ ಪಡೆಯುತ್ತಿರುವ ಶಾಲೆಗಳಂತೆಯೇ ಈ ವಿಶೇಷ ಶಾಲೆಗಳನ್ನು ಅನುದಾನಕ್ಕೊಳಪಡಿಸಿ ತಾರತಮ್ಯತೆಯನ್ನು ಸರಿಪಡಿಸುವ ಅನಿವಾರ್ಯತೆಯನ್ನು ವಿವರಿಸಿ ಸರ್ಕಾರದ ಹಂತದಲ್ಲಿ ಮುಂದಿನ ಕ್ರಮ ಜರುಗಿಸುವಂತೆ ಮತ್ತು ಈ ಶಾಲೆಗಳನ್ನು ಶಿಕ್ಷಣ ಕಾಯ್ದೆಯಡಿ ಪ್ರಾಯೋಗಿಕವಾಗಿ ಅಳವಡಿಸಲು ಒಂದೊಂದು ವಿಶೇಷ ಶಾಲೆಯನ್ನು ವಸತಿಯುತ/ವಸತಿ ರಹಿತ ಮತ್ತು ವೃತ್ತಿಪರ ತರಬೇತಿ ಕೇಂದ್ರಗಳಲ್ಲಿನ ಮಕ್ಕಳ ಸಂಖ್ಯೆ/ಶಾಲೆಗಳ ಸಂಖ್ಯೆ/ಪ್ರತಿ ಶಾಲೆಗೆ ತಗಲುವ ವಾರ್ಷಿಕ ವೆಚ್ಚಗಳನ್ನೊಳಗೊಂಡಂತೆ ಲೆಕ್ಕಚಾರ ಮಾಡಿ ಒಟ್ಟು 235 ಶಾಲೆಗಳ ಪೈಕಿ 38 Grant-in-aid ವಿಶೇಷ ಶಾಲೆಗಳನ್ನು ಹೊರತುಪಡಿಸಿ ರಾಜ್ಯ ಅನುದಾನಕ್ಕೊಳಪಡಿಸಿದ್ದಲ್ಲಿ ರೂ.84.28 ಕೋಟಿ ಮತ್ತು ಶಿಶು ಕೇಂದ್ರೀಕೃತ ಯೋಜನೆಯಡಿ 235 ಶಾಲೆಗಳನ್ನು ರಾಜ್ಯ ಅನುದಾನಕ್ಕೊಳಪಡಿಸಿದ್ದಲ್ಲಿ ತಗಲುವ ಅಂದಾಜು ವೆಚ್ಚ ರೂ.33.73 ಕೋಟಿಗಳೆಂದು

ಅಂದಾಜಿಸಿ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2235-02-800-0-04 (ಯೋಜನೆ) ಉಪ ಲೆಕ್ಕ ಶೀರ್ಷಿಕೆ:101 ರಡಿಯಲ್ಲಿ ಪೂರಕವಾಗಿ ಹಂಚಿಕೆಗೊಳಿಸುವಂತೆ ಹಾಗೂ ಕೇಂದ್ರ ಅನುದಾನ ಪಡೆಯುತ್ತಿರುವ 94 ಶಾಲೆಗಳ ಪೈಕಿ ಅನುಬಂಧದಲ್ಲಿರುವ 68 ಶಾಲೆಗಳು ಸರ್ಕಾರದ ಆದೇಶದನ್ವಯ ನಿರ್ದಿಷ್ಟಪಡಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸುತ್ತಿದ್ದು ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಅನುದಾನಕ್ಕೊಳಪಡಿಸಲು ಅರ್ಹವಾಗಿರುತ್ತವೆ. ಉಳಿದ 26 ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳು ಯೋಜನೆಯ ನಿಯಮಾನುಸಾರ ಅನುದಾನಕ್ಕೊಳಪಡಿಸಲು ಅರ್ಹವಾಗಿರುವುದಿಲ್ಲ. ಈ 26 ಸಂಸ್ಥೆಗಳ ಪೈಕಿ ದೈಹಿಕ ಅಂಗವಿಕಲ ಮಕ್ಕಳಿಗೆ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಅನುಬಂಧದಲ್ಲಿರುವ 10 ಸ್ವಯಂ ಸೇವಾ ಸಂಸ್ಥೆಗಳು ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಅನುದಾನ ಪಡೆಯಲು ಅವಕಾಶವಿಲ್ಲದ ಕಾರಣ, ಸದರಿ ಸಂಸ್ಥೆಗಳು ಈ ವಿಶೇಷ ಶಾಲೆಗಳನ್ನು ಇಲಾಖೆಯಿಂದ ಅನುಮತಿ ಪಡೆದು ಬಹಳಷ್ಟು ವರ್ಷಗಳಿಂದ ನಡೆಸುತ್ತಾ ಬಂದಿರುವುದರಿಂದ ಹಾಗೂ ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 964 ವಿಕಲಚೇತನ ಮಕ್ಕಳ ಹಿತದೃಷ್ಟಿಯಿಂದ ಒಂದು ಬಾರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಅನುದಾನಕ್ಕೊಳಪಡಿಸಲು ಸೇರ್ಪಡೆ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

| ಕ್ರ. ಸಂ. | ವಿಶೇಷ ಶಾಲೆಯ ವಿಧ | ಮಕ್ಕಳ ಸಂಖ್ಯೆ | ಶಾಲೆಗಳ ಸಂಖ್ಯೆ |
|---|---|---|---|
| 1 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | 50 | 80 |
| 2 | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | 50 | 35 |
| 3 | ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆ | 50 | 50 |
| 4 | ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ | 50 | 50 |
| 5 | ವೃತ್ತಿಪರ ತರಬೇತಿ ಕೇಂದ್ರ | 50 | 20 |
| | | ಒಟ್ಟು | 235 |

ಮೇಲಿನ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆಯಂತೆ ಉಲ್ಲೇಖ(1)ರ ಪ್ರಸ್ತಾವನೆಯನ್ನು ಪರಿಷ್ಕರಿಸಿ ಸಲ್ಲಿಸಿದ ಮರು ಪ್ರಸ್ತಾವನೆಯಂತೆ 235 ವಿಶೇಷ ಶಾಲೆಗಳಿಗೆ ಅನುದಾನ ಪ್ರಾರಂಭವಾದ ವರ್ಷ 1978-1990 ರಿಂದ 2006-2010ನೇ ಸಾಲಿನವರೆಗೆ ಹಾಲಿ ಜಾರಿಯಲ್ಲಿರುವ ಸರ್ಕಾರಿ ಆದೇಶ ಸಂಖ್ಯೆ:ಮಮಇ 109 ಪಿಹೆಚ್‌ಪಿ 2010 ದಿ:14.12.2010 ಮತ್ತು ತಿದ್ದುಪಡಿ ಆದೇಶ ದಿ:29.12.2010 ರಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುತ್ತಿರುವ "ಅಂಗವಿಕಲ ಮಕ್ಕಳ ಕೇಂದ್ರೀಕೃತ" ವಿಶೇಷ ಶೈಕ್ಷಣಿಕ ಯೋಜನೆಯಲ್ಲಿ ಅಳವಡಿಸಿ ನಿರ್ವಹಿಸಲು ಹೊರಡಿಸಿರುವ ಮಂಜೂರಾತಿ ಆದೇಶದಲ್ಲಿನ ಮಾರ್ಗಸೂಚಿಯನ್ನು ಅನುಸರಿಸುವ ಷರತ್ತಿಗೊಳಪಟ್ಟು ರೂ.29.00 ಕೋಟಿಗಳ ಪರಿಷ್ಕೃತ ಅಂದಾಜಿನೊಂದಿಗೆ ತಯಾರಿಸಿದ ಪ್ರಸ್ತಾವನೆಗೆ ಮರು ಸಹಮತಿಯನ್ನು ಆರ್ಥಿಕ ಇಲಾಖೆಯಿಂದ ಪಡೆಯುವಂತೆ ಶಿಫಾರಿಸ್ಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, 2012-13ನೇ ಸಾಲಿನಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಕಳುಹಿಸಿದ ಪ್ರಸ್ತಾವನೆಯಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವ್ಯಾಪ್ತಿಗೊಳಪಡುವ 235 ವಿಶೇಷ ಶಾಲೆಗಳನ್ನು ಶಿಕ್ಷಣ ನೀತಿಯಡಿ ಪರಿಗಣಿಸುವ ಪೈಕಿ ಸ್ವಯಂಸೇವಾ ಸಂಸ್ಥೆಗಳಿಂದ ಕೇಂದ್ರ ಸಹಾಯಾನುದಾನದಡಿ ನಿರ್ವಹಿಸುತ್ತಿರುವ 94 ವಿಶೇಷ ಶಾಲೆಗಳನ್ನು ಅಂಗವಿಕಲ ಮಕ್ಕಳ ವಿಶೇಷ ಕೇಂದ್ರೀಕೃತ ಶೈಕ್ಷಣಿಕ ಯೋಜನೆಯಡಿ ಪರಿಗಣಿಸುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಎಫ್‌ಡಿ/906/ವೆಚ್ಚ-3/12 ದಿ:21.3.2013 ರಲ್ಲಿ ಶಿಶು ಆಧಾರಿತ ಸಹಾಯಾನುದಾನಕ್ಕೆ ಒಳಪಡಿಸುವ ಮೊದಲು 94 ವಿಶೇಷ ಶಾಲೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಮಮಇ 109 ಪಿಹೆಚ್‌ಪಿ 2010 ದಿ:14.12:2010 ತಿದ್ದುಪಡಿ ಆದೇಶ ಸಂಖ್ಯೆ:29.12.2010 ರಲ್ಲಿ ನಿರ್ದಿಷ್ಟ ಪಡಿಸಿರುವ ಎಲ್ಲ ಷರತ್ತುಗಳನ್ನು ಪೂರೈಸುತ್ತದೆಯೇ ಎಂಬ ಬಗ್ಗೆ ಆಡಳಿತ ಇಲಾಖೆಯು ಖಾತರಿಪಡಿಸುವುದರೊಂದಿಗೆ ಉಲ್ಲೇಖ(2)ರನ್ವಯ ಕೇಂದ್ರ ಸರ್ಕಾರದ DDRS ಯೋಜನೆಯಡಿ ಪಡೆಯುತ್ತಿದ್ದ ಕೇಂದ್ರ ಸಹಾಯಾನುದಾನದಡಿ 94 ವಿಶೇಷ ಶಾಲೆಗಳನ್ನು ರಾಜ್ಯ ವಲಯದ ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆಯಡಿ ಅಳವಡಿಸಿ ಆಯವ್ಯಯ ಅನುದಾನ ಒದಗಿಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯ ಮೇರೆಗೆ ಉದ್ದೇಶಿಸಲಾಗಿದ್ದು, ಈ ಯೋಜನೆಗೆ ತಗಲುವ ವೆಚ್ಚ ಸುಮಾರು ರೂ.15.00 ಕೋಟಿಗಳಾಗಬಹುದೆಂದು ಅಂದಾಜಿಸಲಾಗಿದೆ. ಈ ಅನುದಾನವನ್ನು ಕೇಂದ್ರ ಸರ್ಕಾರದ ಸಾಮಾನ್ಯ ಅನುದಾನದಡಿ ಬಿಡುಗಡೆಗೊಳಿಸಿದ್ದಲ್ಲಿ, ಈ ವಿಶೇಷ ಶಾಲೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆಯೆಂದು ಭಾವಿಸಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ. ಈ ಶಾಲೆಗಳಿಗೆ ಕೇಂದ್ರ ಸರ್ಕಾರವು ಪ್ರತಿ ವರ್ಷ ಕೇಂದ್ರ ಸಹಾಯಾನುದಾನ ಯೋಜನೆಯಡಿ ಒದಗಿಸುವ ಅನುದಾನದಲ್ಲಿ ಶೇ.5ರಷ್ಟು ಕಡಿತಗೊಳಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಸರ್ಕಾರದ ಸಹಾಯಾನುದಾನದಡಿ ನಿರ್ವಹಿಸುತ್ತಿರುವ 94 ವಿಶೇಷ ಶಾಲೆಗಳ ಪೈಕಿ 68 ವಿಶೇಷ ಶಾಲೆಗಳನ್ನು ರಾಜ್ಯ ವಲಯದ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯ ಸಹಾಯಾನುದಾನದಡಿ ಅಳವಡಿಸಲು ತೀರ್ಮಾನಿಸಲಾಗಿದೆ. ಅದರಂತೆ ಕೆಳಗಿನ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಮಮಇ 168 ಪಿಹೆಚ್‌ಪಿ 2012**

**ಬೆಂಗಳೂರು, ದಿನಾಂಕ: 28.06.2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಸಹಾಯಾನುದಾನದಡಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ನಿರ್ವಹಿಸುತ್ತಿರುವ ಅನುಬಂಧದಲ್ಲಿರುವ 68 ವಿಶೇಷ ಶಾಲೆಗಳನ್ನು ಸರ್ಕಾರಿ ಆದೇಶ ಸಂಖ್ಯೆ:ಮಮಇ 109 ಪಿಹೆಚ್‌ಪಿ 2010 ದಿನಾಂಕ:14.12.2010 ಮತ್ತು ತಿದ್ದುಪಡಿ ಆದೇಶ ದಿನಾಂಕ:29.12.2010 ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆಯಡಿ ಅಳವಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

68 ವಿಶೇಷ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಮುನ್ನಾ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಯ ಶಿಫಾರಸ್ಸಿನ ಮೇರೆಗೆ ಮತ್ತು ಎಲ್ಲ ಮೂಲಭೂತ ಸೌಕರ್ಯ ಹೊಂದಿರುವುದನ್ನು ಖಾತರಿಪಡಿಸಿಕೊಳ್ಳುವ ಷರತ್ತಿನ ಮೇರೆಗೆ ಹಾಗೂ ಈಗಾಗಲೇ 68 ವಿಶೇಷ ಶಾಲೆಗಳು ಕೇಂದ್ರ ಸರ್ಕಾರದ ಅನುದಾನವನ್ನು ಪಡೆಯುತ್ತಿರುವುದರಿಂದ 2013-14ನೇ ಸಾಲಿನಿಂದ ವಾರ್ಷಿಕ ಅನುದಾನವನ್ನು ಮಂಜೂರಾತಿಗೊಳಿಸತಕ್ಕದ್ದು. ಒಂದು ವೇಳೆ ಈ ಶಾಲೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದ ಪಕ್ಷದಲ್ಲಿ ಸಂಸ್ಥೆಗಳ ಮಾನ್ಯತೆಯನ್ನು ನಿಯಮಾನುಸಾರ ರದ್ದುಗೊಳಿಸಲಾಗುವುದು.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2235-02-800-0-04 (ಯೋಜನೆ) ಉಪ ಲೆಕ್ಕ ಶೀರ್ಷಿಕೆ:101 ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 906 ವೆಚ್ಚ-3/2012 ದಿನಾಂಕ:21.3.2013 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ:

1.ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2.ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3.ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4.ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
5.ಎಲ್ಲಾ ಜಿಲ್ಲಾಧಿಕಾರಿಗಳು/ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಮುಖಾಂತರ).
6.ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ಎಲ್ಲ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು (ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಮುಖಾಂತರ).
7.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು.

## ಅನುಬಂಧ-1

### ಕೇಂದ್ರ ಸರ್ಕಾರದ ಅನುದಾನಕ್ಕೆ ಒಳಪಟ್ಟಿದ್ದು, ಅಂಗವಿಕಲ ಮಕ್ಕಳ ಕೇಂದ್ರೀಕೃತ ಯೋಜನೆಯಡಿ ಅನುದಾನಕ್ಕೊಳಪಡಲು ಅರ್ಹವಾಗಿರುವ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ಶಾಲೆಗಳ/ವೃತ್ತಿ ತರಬೇತಿ ಕೇಂದ್ರಗಳ ವಿವರ

| ಕ್ರ ಸಂ | ಸಂಸ್ಥೆಯ ಹೆಸರು | ಸಂಸ್ಥೆಯ ಸ್ವರೂಪ | ಮಕ್ಕಳ ಸಂಖ್ಯೆ |
|---|---|---|---|
| 1 | ಕರ್ನಾಟಕ ಹ್ಯಾಂಡಿಕ್ಯಾಪ್ಡ್ ವೆಲ್‌ಫೇರ್ ಅಸೋಸಿಯೇಷನ್, ಜೀವನಭೀಮಾ ನಗರ, ಕಿವುಡು ಮಕ್ಕಳ ವಿಶೇಷ ವಸತಿಯುತ ಶಾಲೆ ಬೆಂಗಳೂರು. | ಶ್ರವಣದೋಷವುಳ್ಳ ಮಕ್ಕಳ ಶಾಲೆ | 150 |
| 2 | ಶ್ರೀ ರಮಣಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಬೆಂಗಳೂರು ಅಂಧ ಮಕ್ಕಳ ವಸತಿ ಶಾಲೆ, ಬೆಂಗಳೂರು. | ದೃಷ್ಟಿದೋಷವುಳ್ಳ ಮಕ್ಕಳಿಗಾಗಿ ವಸತಿ ಶಾಲೆ & ವೃತ್ತಿತರಬೇತಿ | 175 |
| 3 | ಶ್ರೀ ಶತಶೃಂಗ ವಿದ್ಯಾಸಂಸ್ಥೆ(ರಿ), ತಾವರೆಕೆರೆ, ಬೆಂಗಳೂರು ದಕ್ಷಿಣ | ಶ್ರವಣದೋಷವುಳ್ಳ ಮತ್ತು ವೃತ್ತಿ ತರಬೇತಿ ಶಾಲೆ | 198 |
| 4 | ಗೇರಿಜಂ ಸ್ಪೇಷಲ್ ಸ್ಕೂಲ್ ಫಾರ್ ದಿ ಮೆಂಟಲಿ ರಿಟಾಡೆಡ್, ಬೆಂಗಳೂರು | ಬುದ್ಧಿಮಾಂದ್ಯ ಮಕ್ಕಳ ಶಾಲೆ | 82 |
| 5 | ಕೃಷ್ಣ ಟ್ರಸ್ಟ್, ಕೃಷ್ಣ ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ಹಳೇ ಬೈರೋಹಳ್ಳಿ, ಕೆಂಗೇರಿ, ಬೆಂಗಳೂರು | ಬುದ್ಧಿಮಾಂದ್ಯ ಮಕ್ಕಳ ಶಾಲೆ | 45 |
| 6 | ಹಿಂದೂ ಸೇವಾ ಪ್ರತಿಷ್ಠಾನ, ಅರುಣ ಚೇತನ ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ, ಮಲ್ಲೇಶ್ವರಂ ಬೆಂಗಳೂರು. | ಮಿಶ್ರ ವಿಕಲಚೇತನ ಮಕ್ಕಳ ಶಾಲೆ | 60 |
| 7 | ಎಸ್.ಜಿ.ಎಸ್.ವಾಗ್ದೇವಿ ಕಿವುಡು ಮಕ್ಕಳ ಶಾಲೆ, ಬೆಂಗಳೂರು | ಶ್ರವಣದೋಷವುಳ್ಳ ಮಕ್ಕಳ ಶಾಲೆ | 23 |
| 8 | ವಿದ್ಯಾರಣ್ಯ ಶಿಕ್ಷಣ ಮತ್ತು ಅಭಿವೃದ್ಧಿ ಸಂಸ್ಥೆ, ವಿಗ್ನೋನಗರ, ಬೆಂಗಳೂರು. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 70 |
| 9 | ದಿವ್ಯಶಾಂತಿ ಕ್ರಿಶ್ಚಿಯನ್ ಆರ್ಗನೈಜೇಷನ್ ಬುದ್ಧಿಮಾಂದ್ಯ ಮಕ್ಕಳ ವಸತಿ ವಿಶೇಷ ಶಾಲೆ, ಬೆಂಗಳೂರು | ಬುದ್ಧಿಮಾಂದ್ಯ ಮಕ್ಕಳ ಶಾಲೆ | 50 |
| 10 | ಪ್ರಿಯದರ್ಶಿನಿ ಜನಸೇವಾ ಸಾಗರ ಸಮಿತಿ, ಹಳೇ ಹುಬ್ಬಳ್ಳಿ, ಧಾರವಾಡ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 210 |
| 11 | ಹೊನ್ನಮ್ಮ ಎಜುಕೇಷನ್ ಸೊಸೈಟಿ, ಧಾರವಾಡ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 110 |
| 12 | ಮನೋವಿಕಾಸ ಇನ್ಸ್ಟಿಟ್ಯೂಟ್ ಆಫ್ ಮೆಂಟಲಿ ರಿಟಾರ್ಡೆಡ್, ಹುಬ್ಬಳ್ಳಿ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 90 |
| 13 | ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಸೇವಾಶ್ರಮ ಸಮಿತಿ, ವಿರಾಪುರ, ಓಣಿ, ಧಾರವಾಡ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 82 |
| 14 | ಆರೂಢ ಅಂಗವಿಕಲರ ಶಿಕ್ಷಣ ಸಂಸ್ಥೆ, ಶ್ರೀ ಸಿದ್ಧಾರೂಢ ಮುಖ್ಯರಸ್ತೆ, ಹಳೇ ಹುಬ್ಬಳ್ಳಿ, ಧಾರವಾಡ, | ಅಂಧ ಮಕ್ಕಳ ವಿಶೇಷ ಶಾಲೆ | 69 |
| 15 | ವಿನಾಯಕ ಎಜುಕೇಷನ್ ಸೊಸೈಟಿ(ರಿ), ದಾವಣಗೆರೆ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 325 |
| 16 | ಅಂಗವಿಕಲರ ಆಶಾಕಿರಣ ಟ್ರಸ್ಟ್(ರಿ) ಶ್ಯಾಮನೂರು ರಸ್ತೆ, ದಾವಣಗೆರೆ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 242 |
| 17 | ಚನ್ನಬಸವೇಶ್ವರ ಗ್ರಾಮೀಣ ವಿದ್ಯಾಸಂಸ್ಥೆ, ಶಿಗ್ಗಾವಿ, ಹಾವೇರಿ | ದೃಷ್ಟಿದೋಷವುಳ್ಳ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಾಲೆ | 75 |
| 18 | ಸೇವಾ ಅಂಧರ ಸಂಸ್ಥೆ, ರೇಣುಕ ಯಲ್ಲಮ್ಮ ಕಿವುಡ ಮಕ್ಕಳ ಶಾಲೆ, ರಾಣೆಬೆನ್ನೂರು, ಹಾವೇರಿ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 79 |
| 19 | ದಿವ್ಯಜ್ಯೋತಿ ವಿದ್ಯಾ ಸಂಸ್ಥೆ, ಹಾವೇರಿ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 100 |
| 20 | ಪಂಡಿತ ಪಂಚಾಕ್ಷರಿ ಗವಾಯಿಗಳವರ ಅಂಧರ ವಸತಿಯುತ ವಿಶೇಷ ಸಮಗೀತ ಹಾಗೂ ಪ್ರಾಥಮಿಕ ಶಾಲೆ, ಪಂಚಾಕ್ಷರಿ ನಗರ, ಗದಗ. | ಅಂಧ ಮಕ್ಕಳ ವಸತಿಯುತ ಶಾಲೆ | 204 |
| 21 | ಬಿ.ಡಿ.ತಟ್ಟಿ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್, ಲಕ್ಷ್ಮೇಶ್ವರ ಗದಗ ಜಿಲ್ಲೆ. | ಶ್ರವಣದೋಷವುಳ್ಳ ಮಕ್ಕಳ ಶಾಲೆ | 200 |
| 22 | ಮಂಜು ಎಜುಕೇಷನ್ ಸೊಸೈಟಿ, ಬಾಲಾಜಿ ರಸ್ತೆ, ಬೆಟ್ಟಗೇರಿ ಗದಗ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 90 |

| | | | |
|---|---|---|---|
| 23 | ಹೊನ್ನಮ್ಮ ಎಜುಕೇಷನ್ ಸೊಸೈಟಿ, ಹಾಲುಗೇರಿ ನಾಕ, ಜಿ.ಟಿ.ಕಾಲೇಜು ರೋಡ್, ಗದಗ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 59 |
| 24 | ಶ್ರೀ ಅನ್ನದಾನೇಶ್ವರ ವಿಜಯ ವಿದ್ಯಾ ಪ್ರಸಾರಕ ಸಮಿತಿ ನರೇಗಲ್, ರೋಣ, ಗದಗ. | ಶ್ರವಣದೋಷವುಳ್ಳ ಮಕ್ಕಳ ಶಾಲೆ | 144 |
| 25 | ಬಾಪೂಜಿ ವಿದ್ಯಾಸಂಸ್ಥೆ, ಗಜೇಂದ್ರಗಡ, ಗದಗ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 65 |
| 26 | ವೆಂಕಟೇಶ್ವರ ಗ್ರಾಮಾಂತರ ಹಿಂದಿ ಶಿಕ್ಷಣ ಪ್ರಚಾರ ಸಮಿತಿ, ಗದಗ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 80 |
| 27 | ಆದರ್ಶ ವಿದ್ಯಾಸಂಸ್ಥೆ, ಬಳ್ಳಾರಿ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 60 |
| 28 | ವಿಶ್ವಭಾರತಿ ಕಲಾನಿಕೇತನ ವಿದ್ಯಾಸಂಸ್ಥೆ (ರಿ), ಜಿ.ಚೆಂಗಾರೆಡ್ಡಿ ವಸತಿಯುತ ಶಾಲೆ, ಬಳ್ಳಾರಿ. | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | 70 |
| 29 | ರಂಗರಾವ್ ಸ್ಮಾರಕ ಅಂಧ ಹೆಣ್ಣುಮಕ್ಕಳ ವಸತಿ ಶಾಲೆ, ಮೈಸೂರು | ದೃಷ್ಟಿದೋಷವುಳ್ಳ ಮಕ್ಕಳ ಶಾಲೆ | 85 |
| 30 | ಶ್ರೀಮತಿ ಪುಟ್ಟವೀರಮ್ಮ ಕಿವುಡ ಮಕ್ಕಳ ಶಾಲೆ, ಮೈಸೂರು | ಶ್ರವಣದೋಷವುಳ್ಳ ಮಕ್ಕಳ ಶಾಲೆ | 87 |
| 31 | ಡಾಟರ್ ಆಫ್ ಅವರ್ ಲೇಡಿ ಮರ್ಸಿರೆಸಿಡೆನ್ಸಿಯಲ್ ಸ್ಕೂಲ್ ಫಾರ್ ಹಿಯರಿಂಗ್ ಇಂಪೇರ್ಡ್, ಹೆಚ್ ಡಿ ಕೋಟೆ, ಮೈಸೂರು | ಶ್ರವಣದೋಷವುಳ್ಳ ಮಕ್ಕಳ ಶಾಲೆ | 127 |
| 32 | ಸಾಯಿರಂಗ ಎಜುಕೇಷನ್ ಸೊಸೈಟಿ, ಮೈಸೂರು. | ಶ್ರವಣದೋಷವುಳ್ಳ ಮಕ್ಕಳ ಶಾಲೆ | 100 |
| 33 | ಮೌಂಟ್ ಮೋರ್ಟ್ ಕಿವುಡು ಮಕ್ಕಳ ಶಾಲೆ, ಬೆಳಗೊಳ ಮಂಡ್ಯ | ಶ್ರವಣದೋಷವುಳ್ಳ ಮಕ್ಕಳ ಶಾಲೆ | 80 |
| 34 | ಜ್ಞಾನವಿಕಾಸ ಎಜುಕೇಷನ್ ಟ್ರಸ್ಟ್ ಕಿವುಡ ಮಕ್ಕಳ ವಸತಿ ಶಾಲೆ, ಚಿನಕುರಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ. | ಶ್ರವಣದೋಷವುಳ್ಳ ಮಕ್ಕಳ ಶಾಲೆ | 84 |
| 35 | ಅಸೋಸಿಯೇಷನ್ ಫಾರ್ ರಿಹ್ಯಾಬಿಲಿಟೇಷನ್ ಆಫ್ ದಿ ಡಿಸೇಬಲ್ಡ್ (ಎಆರ್‌ಡಿ) ಗಂಗಾವತಿ ಕೊಪ್ಪಳ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 68 |
| 36 | ಮಾನಸ ಬುದ್ಧಿಮಾಂದ್ಯ ಮಕ್ಕಳ ಶಾಲೆ & ರಿಹ್ಯಾಬಿಲಿಟೇಷನ್ ಟ್ರೈನಿಂಗ್ ಸೆಂಟರ್, ಉಡುಪಿ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 146 |
| 37 | ಆಶಾನಿಲಯ ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ ಶಾಂತಿನಗರ, ಉಡುಪಿ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 91 |
| 38 | ವಾಗ್ಜ್ಯೋತಿ ಡೆಫ್ ಅಂಡ್ ಡಂಬ್ ಡಿಸೇಬಲ್ಡ್ ವೆಲ್‌ಫೇರ್ ಸೊಸೈಟಿ ಉಡುಪಿ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 28 |
| 39 | ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ, ಸಿದ್ದರ, ಕಾರವಾರ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 78 |
| 40 | ಉತ್ತರ ಕನ್ನಡ ಡಿಸ್ಟ್ರಿಕ್ಟ್ ವೆಲ್ಫೇರ್ ಅಸೋಸಿಯೇಷನ್, ಶಿರಸಿ, ಉತ್ತರ ಕನ್ನಡ. | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 86 |
| 41 | ಜ್ಞಾನಪ್ರಜ್ಞಾ ಎಜುಕೇಷನ್ ಸೊಸೈಟಿ, ದೇಶಪಾಂಡೆ ನಗರ, ಮುಂಡಗೋಡ, ಉತ್ತರಕನ್ನಡ ಜಿಲ್ಲೆ | ದೃಷ್ಟಿ ದೋಷವುಳ್ಳ ಮಕ್ಕಳ ಶಾಲೆ | 63 |
| 42 | ಕರಾವಳಿ ವೆಲ್ಫೇರ್ ಸೊಸೈಟಿ, ಅರೆಅಂಗಡಿ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ | 48 |
| 43 | ಶ್ರೀ ರೇಣುಕಾ ಯಲ್ಲಮ್ಮ ವಿದ್ಯಾವರ್ಧಕ ಸಂಘ, ಸವದತ್ತಿ, ಬೆಳಗಾಂ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 105 |
| 44 | ಬೆಳಗಾಂ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್, ನಾಗನೂರ, ಗೋಕಾಕ್ | ಶ್ರವಣ ದೋಷವುಳ್ಳ ಮಕ್ಕಳ ವಸತಿರಹಿತ ಶಾಲೆ | 30 |
| 45 | ಶಿವಲಿಂಗೇಶ್ವರ ಎಜುಕೇಷನ್ ಸೊಸೈಟಿ, ಸವದತ್ತಿ ಬೆಳಗಾಂ | ದೃಷ್ಟಿ ದೋಷವುಳ್ಳ ಮಕ್ಕಳ ಶಾಲೆ | 31 |
| 46 | ದೂದ್‌ನಾನಾ ವಿಕಾಸ ಶಿಕ್ಷಣ ಸಂಸ್ಥೆ, ಇಡಕಲ್ ಡ್ಯಾಮ್, ಹುಕ್ಕೇರಿ, ಬೆಳಗಾವಿ | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | 65 |
| 47 | ಅಜಯ್ ವೆಲ್‌ಫೇರ್ ಅಸೋಸಿಯೇಷನ್ ಫಾರ್ ದಿ ರಿಹ್ಯಾಬಿಲಿಟೇಷನ್ ಆಫ್ ದಿ ಡಿಸೇಬಲ್ಡ್, ಜ್ಯೋತಿ ನಗರ, ಬೆಳಗಾವಿ. | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 55 |
| 48 | ದಕ್ಷಿಣ ಭಾರತ ದಲಿತ ಎಜುಕೇಷನ್ ಸೊಸೈಟಿ (ರಿ) ಗುಲ್ಬರ್ಗ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 51 |
| 49 | ಅಂಧ & ಅಂಗವಿಕಲ ಮಕ್ಕಳ ಕ್ಷೇಮಾಭಿವೃದ್ಧಿ ಸಂಸ್ಥೆ(ರಿ), ಗುಲ್ಬರ್ಗ | ದೃಷ್ಟಿ ದೋಷವುಳ್ಳ ಮಕ್ಕಳ ಶಾಲೆ | 55 |

| | | | |
|---|---|---|---|
| 50 | ಸಂಗ್ರಾಮ್ ಶಿಕ್ಷಣ ಸಂಸ್ಥೆ, ಬೀದರ್ (ಅಂಧ ಮಕ್ಕಳ ಪಾಠಶಾಲೆ) | ದೃಷ್ಠಿದೋಷವುಳ್ಳ ಮಕ್ಕಳ ವಸತಿಯುತ ಶಾಲೆ | 52 |
| 51 | ಶ್ರೀ ಲಕ್ಷ್ಮಿ ವಿದ್ಯಾವರ್ಧಕ ಸಂಘ, ಮುಡಬಿ, ಬೀದರ್ | ಶ್ರವಣ ದೋಷವುಳ್ಳ ಮಕ್ಕಳ ವಸತಿಯುತ ಶಾಲೆ | 75 |
| 52 | ಶ್ರೀ ಮಾಣಿಕ್ ಪ್ರಭು ಶಿಕ್ಷಣ ಸಂಸ್ಥೆ, ಮಾಣಿಕ ನಗರ, ಹುಮನಾಬಾದ್, ಬೀದರ್ | ದೃಷ್ಠಿದೋಷವುಳ್ಳ ಮಕ್ಕಳ ವಸತಿಯುತ ಶಾಲೆ | 75 |
| 53 | ಎಂ. ಜಿ. ವಿದ್ಯಾಸಂಸ್ಥೆ, ತುಮಕೂರು ಇವರ ವತಿಯಿಂದ ನಡೆಯುತ್ತಿರುವ ಸ್ಪಂದನ ಬುದ್ಧಿಮಾಂದ್ಯರ ಶಾಲೆ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 60 |
| 54 | ಪೇರೆಂಟ್ಸ್ ಅಸೋಸಿಯೇಷನ್ ಆಫ್ ಮೆಂಟಲಿ ಹ್ಯಾಂಡಿಕ್ಯಾಪ್ಡ್ ಚಿಲ್ಡ್ರನ್, ಬಾಲಭವನ, ತುಮಕೂರು | ಬುದ್ಧಿಮಾಂದ್ಯ ಮಕ್ಕಳ ಶಾಲೆ | 60 |
| 55 | ಆಶಾಕಿರಣ ಎಜುಕೇಷನ್ ಅಂಡ್ ರಿಹ್ಯಾಬಿಲಿಟೇಷನ್ ಸೊಸೈಟಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ | ಅಂಧ ಮಕ್ಕಳ ಶಾಲೆ | 65 |
| 56 | ಪರಮಾನಂದ ಜನಸೇವಾ ಶಿಕ್ಷಣ ಸಂಸ್ಥೆ, ಮುಳಸಾವಳಗಿ, ಬಿಜಾಪುರ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 62 |
| 57 | ಶ್ರೀ ಮುರುಘರಾಜೇಂದ್ರ ಶಿವಚಾರ್ಯ ಮಹಾಸ್ವಾಮಿ ವಿದ್ಯಾ ಸಮಿತಿ, ಹುನಗುಂದ ತಾ॥, ಬಾಗಲಕೋಟೆ. | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 74 |
| 58 | ಶ್ರೀ ಯಲಗೂರೇಶ್ವರ ವಿದ್ಯಾವರ್ಧಕ ಸಂಘ, ಅಮೀನಗಢ, ಹುನಗುಂದ ತಾಲ್ಲೂಕು, ಬಾಗಲಕೋಟೆ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 80 |
| 59 | ಕಿವುಡ ಮತ್ತು ಮೂಗರ ಸಂಸ್ಥೆ(ರಿ) ನಾಯಕಹಟ್ಟಿ ರಸ್ತೆ, ರಾಜೀವ್‌ನಗರ, ಚಳ್ಳಕೆರೆ, ಚಿತ್ರದುರ್ಗ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 60 |
| 60 | ಶತಶೃಂಗ ವಿದ್ಯಾಸಂಸ್ಥೆ(ರಿ) ಶಿರಡಿ ಸಾಯಿ ಮಂದಿರ ಕಟ್ಟಡ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು (ಕೋಲಾರ) | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 94 |
| 61 | ಜೈಭಾರತ್ ಕಿವುಡ ಮಕ್ಕಳ ವಸತಿ ಶಾಲೆ, ಕೋಲಾರ | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 90 |
| 62 | ವಾದಿರಾಜ ಟ್ರಸ್ಟ್(ರಿ), ಬೆಂಗಳೂರು ಶಾರದ ನವಜೀವನ ವಿದ್ಯಾಮಂದಿರ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ಕೋಲಾರ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 52 |
| 63 | ನಂದಾದೀಪ ಅಂಗವಿಕಲರ ಕಿವುಡು ಮತ್ತು ಮನಶ್ಚೇತನ ಸಂಸ್ಥೆ, ಮಾಲೂರು, ಕೋಲಾರ ಜಿಲ್ಲೆ. | ಬುದ್ಧಿಮಾಂದ್ಯ ಮಕ್ಕಳ ಶಾಲೆ | 65 |
| 64 | ರೋಟರಿ ಟ್ರಸ್ಟ್ (ರಿ), ಸಕಲೇಶಪುರ, ಹಾಸನ, ಎನ್.ಕೆ.ಗಣಪಯ್ಯ, ಕಿವುಡು ಮಕ್ಕಳ ಶಾಲೆ. | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 105 |
| 65 | ವಿದ್ಯಾರಣ್ಯ ಶಿಕ್ಷಣ ಮತ್ತು ಅಭಿವೃದ್ಧಿ ಸಂಸ್ಥೆ, ಚನ್ನರಾಯಪಟ್ಟಣ, ಹಾಸನ | ದೃಷ್ಠಿದೋಷವುಳ್ಳ ಮಕ್ಕಳ ವಸತಿ ಶಾಲೆ | 80 |
| 66 | ಕರ್ನಾಟಕ ಹ್ಯಾಂಡಿಕ್ಯಾಪ್ಡ್ ಅಸೋಸಿಯೇಷನ್, ವಿದ್ಯಾನಗರ, ಹಾಸನ. | ಶ್ರವಣ ದೋಷವುಳ್ಳ ಮಕ್ಕಳ ಶಾಲೆ | 60 |
| 67 | ಸರ್ವೋದಯ ಸರ್ವೀಸ್ ಸೊಸೈಟಿ (ರಿ) ವಿಜಯಪುರ, ಬೆಂ (ಗ್ರಾ) ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ಶಾಲೆ | 80 |
| 68 | ಸ್ವದೇಶಿ ಮಹಿಳಾ ಮಂಡಳಿ, ಜ್ಞಾನಭಾರತಿ ಕಿವುಡು ಮಕ್ಕಳ ಶಾಲೆ, ಮಧುಗಿರಿ. | ಕಿವುಡು ಮಕ್ಕಳ ವಸತಿಶಾಲೆ | 60 |

(ಬಿ. ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.